(ಓ) ಕುಣಿಗಲ್ ತಾಲ್ಲೂಕಿನ ವಿದ್ಯುಚ್ಛಕ್ತಿಯಲ್ಲಿ ಆಗುತ್ತಿರುವ ವ್ಯತ್ಯಯ

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಕಳೆದ ಒಂದೂವರೆ ತಿಂಗಳುಗಳಿಂದ ಕುಣಿಗಲ್ ತಾಲ್ಲೂಕಿನಲ್ಲಿ ಸಾಯಂಕಾಲದ ವೇಳೆಯಲ್ಲಿ ಕರೆಂಟ್ ಇಲ್ಲ. ಇದಕ್ಕೆ ಕಾರಣವೇನೆಂದರೆ ಮೂರು ಬ್ರೇಕರ್ಸ್ ಸುಟ್ಟು ಹೋಗಿದೆ ಎಂದು ಹೇಳುತ್ತಿದ್ದಾರೆ. ಇದನ್ನು ಯಾವಾಗ ರಿಪೇರಿ ಮಾಡುತ್ತೀರೆಂದು ನಾವು ಒಂದೂವರೆ ತಿಂಗಳುಗಳಿಂದ ಕೇಳುತ್ತಿದ್ದೇವೆ. ಇದುವರೆಗೂ ರಿಪೇರಿಯಾಗಿಲ್ಲ. ಈಗ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸಮಯ, ಅವರು ನಮ್ಮ ಮೇಲೆ ಶಾಪ ಹಾಕುತ್ತಿದ್ದಾರೆ. ಆದುದರಿಂದ ದಯಮಾಡಿ ಈ ಮೂರು ಬ್ರೇಕರ್ಸ್‌ಗಳನ್ನು ರಿಪೇರಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಜನರಿಗೆ ನಾವು ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಇಂಧನ ಸಚಿವರು ಇಲ್ಲಿದ್ದಾರೆ, ಅವರಿಗೆ ನಾನು ತಮ್ಮ ಮೂಲಕ ಕೋರಿಕೆ ಮಾಡಿ ಕೊಳ್ಳುವುದದೇನೆಂದರೆ ರಿಪೇರಿಯನ್ನು ನಾಳೆ ಒಳಗಡೆ ಎಂದರೆ 24 ಗಂಟೆಯೊಳಗೆ ಮಾಡಿಸಿ, ವಿದ್ಯಾರ್ಥಿಗಳಿಗೆ ಪರೀಕ್ಷೆ ಇರುವುದರಿಂದ ಅವರಿಗೆ ಆಗುವಂತಹ ತೊಂದರೆಯಿಂದ ಕಾಪಾಡಬೇಕು. ಕುಣಿಗಲ್ ತಾಲ್ಲೂಕು ಕಗ್ಗತ್ತಲಲ್ಲಿರುವುದರಿಂದ ಅದಕ್ಕೆ ಬೆಳಕನ್ನು ತೋರಿಸಬೇಕೆಂದು ಮಾನ್ಯ ಇಂಧನ ಸಚಿವರನ್ನು ಕೋರಿ ಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ಖಾತೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕುಣಿಗಲ್ ತಾಲ್ಲೂಕಿನಲ್ಲಿ 66ಕೆ ವಿ ಸಬ್ ಸ್ಟೇಷನ್‌ದ್ದು 11 ಕೆ.ವಿ.ಯ ಮೂರು ವ್ಯಾಕ್ಯೂಮ್ ಸರ್ಕ್ಯೂಟ್ ಬೇಕರ್ಸ್ ಅಲ್ಲೂ ಆಗಿದೆ. ಈಗಾಗಲೇ ಟೆಂಪರರಿ ಅಡ್ಜೆಸ್ಟ್‌ಮೆಂಟ್ ಕೂಡ ಮಾಡಿದ್ದೇವೆ. ಈಗ ಮಾನ್ಯ ಸದಸ್ಯರುಗಳ ಸಮ್ಮುಖದಲ್ಲಿ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಆದಷ್ಟು ಬೇಗ ವ್ಯವಸ್ಥೆ ಮಾಡಿ ಕೊಡುತ್ತೇವೆನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಔ) ದೂರದರ್ಶನದಲ್ಲಿ ರಾಜ್ಯದ ವಿಷಯಗಳ ಪ್ರಸಾರ ಕಡೆಗಾಣಿಸಿರುವುದು

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾನು ದೂರದರ್ಶನದ ಬಗ್ಗೆ ಮೊದಲೇ ತಿಳಿಸಿದ್ದೇನೆ. ನನಗೆ ದೂರದರ್ಶನದವರ ಬಗ್ಗೆ ಏನೂ ವೈಯಕ್ತಿಕವಾದ ದ್ವೇಷವಿಲ್ಲ. ಕರ್ನಾಟಕ ರಾಜ್ಯದಲ್ಲೇ ಒಂದು ರೀತಿಯಲ್ಲಿ ನಡೆಯುತ್ತಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಒಂದೊಂದು ರೀತಿಯಲ್ಲಿ ಆಗುತ್ತಿದೆ. ಬೆಂಗಳೂರು ದೂರದರ್ಶನ ಅದರ ಸಮಗ್ರತೆಯ ಬಗ್ಗೆ ಬಹಳ ವಿವರವಾಗಿ ಚರ್ಚೆಯಾಗಬೇಕಾಗಿದೆ. ಅಲ್ಲಿ ನಡೆಯುವಂತಹ ಕಾರ್ಯಕ್ರಮಗಳು ಸರಿಯಾಗಿ ನಡೆಯುತ್ತಿಲ್ಲ. ಅದು ಬೇರೆ ವಿಷಯ, ಆದರೆ ತಮ್ಮಮೂಲಕ ಒಂದು ಮಾತನ್ನು ತಮ್ಮಗಮನಕ್ಕೆ ತರುತ್ತಿದ್ದೇನೆ. ಈ ಸದನದ ಪ್ರಚಾರವನ್ನು ಸಹ ಸರಿಯಾಗಿ ಕೊಡುತ್ತಾ ಇಲ್ಲ. ನಾವು ಸದನದಲ್ಲಿ ಪ್ರಸ್ತಾಪ ಮಾಡಿದಂತಹ ವಿಚಾರವನ್ನು ಕೊಡುತ್ತಿಲ್ಲ. ರಾಷ್ಟ್ರೀಯ ಹಬ್ಬಗಳು ಹಾಗೂ ಸ್ವಾತಂತ್ರ್ಯ ದಿನಾಚರಣೆ, ಅನೇಕ ರಾಷ್ಟ್ರೀಯ ಹಬ್ಬಗಳನ್ನು ನಾವು ಆಚರಣೆ ಮಾಡುತ್ತೇವೆ. ಹಿಂದೆ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವಂತಹ ಸಂದರ್ಭದಲ್ಲಿ ಕ್ಯಾಮರಗಳನ್ನು ಕಳಚಿ ತೆಗೆದು ಒಳ್ಳೆಯ ಪ್ರಚಾರ ಮಾಡುವಂಥಾದ್ದು ಎಲ್ಲಾ ಪಕ್ಷದ್ದು,

ಇಲ್ಲಿ ಆ ಪಕ್ಷ ಈ ಪಕ್ಷವೆಂದು ಇಲ್ಲ. ಹಾಗೆಯೇ ರೈತರ ಹೋರಾಟವಾಗಲಿ, ಬೇರೆ ಬೇರೆ ಹೋರಾಟವಾಗಲಿ ಅವೆಲ್ಲವನ್ನು ಮಡಿವಂತಿಕೆಯಾಗಿ ನೋಡಿ ಕೇವಲ ಕೇಂದ್ರದ ಒಂದು ಕೈಗೊಂಬೆಯಾಗಿದೆಯೇ ಹೊರತು, ಈ ರಾಜ್ಯದಲ್ಲಿ ಸುದ್ದಿ 7.30 ಗಂಟೆಗೆ ಕೊಡುವ ವೇಳೆಗೆ ಪ್ರಮುಖವಾದ ಚಿಂತನೆ ಮಾಡಿ ಈ ರಾಜ್ಯದ ಸಮಗ್ರತೆಯ ಬಗ್ಗೆ ಇದು ಯಾವುದೂ ಮಾಡುತ್ತಾ ಇಲ್ಲ. ಇದನ್ನು ನಾನು ಒಂದದಲ್ಲ ಎರಡಲ್ಲ, ಅನೇಕ ಬಾರಿ ಹೇಳಿದ್ದೇನೆ, ಹಿಂದೆ ಈ ರೀತಿ ಇರಲಿಲ್ಲ. ಹಿಂದೆ ಪ್ರತಿಯೊಂದನ್ನು ಈ ಸದನದ ಬಗ್ಗೆ ವಿಚಾರಪೂರಿತವಾಗಿ ಬರುವಂತಹ ಅನೇಕ ಸದಸ್ಯರುಗಳು ಪ್ರಶ್ನೆಗಳನ್ನು ಕೇಳಿದಾಗ ಬೇರೆ ಬೇರೆ ಚರ್ಚೆಯಾಗಿರುವಂಥಾದ್ದರ ಬಗ್ಗೆ ಎಲ್ಲಾ ಪ್ರಚಾರ ಮಾಡುತ್ತಿದ್ದರು. ಇದು ತಮ್ಮ ಗಮನಕ್ಕೂ ಬಂದಿದೆ. ತಾವು ತಮ್ಮ ಕಾರ್ಯಾಲಯಕ್ಕೆ ದೂರದರ್ಶನವರನ್ನು ಕರೆಯಿಸಿ ಹೇಳಿದ್ದೀರಿ. ಈಗ ನಮಗೆ ಈ ವಿಷಯದಲ್ಲಿ ಎಲ್ಲರಿಗೆ ನೋವಾಗಿದೆ. ಆದುದರಿಂದ ದಯಮಾಡಿ ಅದೇ ರೀತಿ ಮುಂದುವರೆಯುವುದಾದರೆ ಅವರು ಅನೇಕ ವಿಚಾರಗಳಲ್ಲಿ ಕೆಲವು ತಪ್ಪುಗಳನ್ನು ಮಾಡುತ್ತಿದ್ದಾರೆ. ಆದುದರಿಂದ ಅವರಿಗೆ ಇದು ಸರಿಯಾದಂತಹ ನೀತಿಯಲ್ಲವೆಂದು ಹೇಳಿ, ನಾನು ಅವರಿಗೆ ಮನವಿ ಮಾಡುತ್ತಿದ್ದೇನೆ. ನಾವು ಇಲ್ಲಿ ಹೋರಾಟಕ್ಕಿಂತ ಹೆಚ್ಚಿಗೆ ಮನವಿಯನ್ನು ಮಾಡುತ್ತಿದ್ದೇವೆ. ಈ ಸದನವನ್ನು ಮತ್ತು ರಾಷ್ಟ್ರೀಯ ಹಬ್ಬಗಳನ್ನು, ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಅಂಬೇಡ್ಕರ್ ದಿನಾಚರಣೆ ಇವೆಲ್ಲವನ್ನೂ ಮಾಡುವಾಗ ಇವರು ಏನು ಮಾಡುತ್ತಿದ್ದರೆಂದರೆ ಒಂದು ಮುಖವಾಡವನ್ನು ಇಟ್ಟುಕೊಂಡು ಮಾಡುವುದು, ಈಗ ಅದು ಯಾವುದನ್ನು ಮಾಡುತ್ತಿಲ್ಲ. ಮೊದಲು ಪ್ರತಿಯೊಂದನ್ನು ಪ್ರಚಾರ ಮಾಡುತ್ತಿದ್ದರು. ಇದು ಒಂದು ರೀತಿಯ ಮಡಿವಂತಿಕೆಯ ನಿರ್ಧಾರವಾಗಿದೆ. ಇದು ಕೇಂದ್ರಮುಖವಾಣಿಯಾಗಿ ಕುಳಿತಿದೆ, ಎಂದು ನನಗನಿಸುತ್ತದೆ. ಇದು ಈ ರೀತಿಯಾಗಬಾರದು. ಈ ಬಗ್ಗೆ ಸ್ಪಷ್ಟವಾದಂತಹ ಒಂದು ಹೋರಾಟ ಆರಂಭವಾಗುತ್ತದೆ. ಅದಕ್ಕೆ ಅವಕಾಶವನ್ನು ಕೊಡಬಾರದು ಎಂದು ಹೇಳಿ ತಮ್ಮ ಮೂಲಕ ಹೇಳುತ್ತಿದ್ದೇನೆ. ಈಗ ಕೇಂದ್ರದಲ್ಲಿ ವಾರ್ತಾಮಂತ್ರಿಗಳಾಗಿ ಮಾನ್ಯ ಇಬ್ರಾಹಿಂರವರು ಇದ್ದಾರೆ, ಅವರಿಗೆ ಇದನ್ನು ಹೇಳಬೇಕು. ಈ ಪರಿಸ್ಥಿತಿ ಅತ್ಯಂತ ದುಃಖಕರವಾದಂಥಾದ್ದು ಮತ್ತು ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅವರ ರೀತಿ ಅವಿವೇಕದ ಪರಮಾವಧಿಯಾಗುತ್ತಿದೆ, ಇದು ಸರಿಯಲ್ಲ. ಇದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೂ ಮತ್ತು ಮಾನ್ಯ ನಂಜೇಗೌಡರಿಗೂ ಅನುಭವವಾಗಿದೆ. ಅವರು ತಮ್ಮ ಅನುಭವ ಏನಾಗಿದೆ ಎಂಬ ಬಗ್ಗೆ ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಮ್ಮ ಅನುಭವಕ್ಕಿಂತಲೂ ಹೆಚ್ಚಿಗೆ ನಾವು ತಮ್ಮ ಪ್ರಚಾರವಾಗಬೇಕೆಂದು ಅಪೇಕ್ಷೆಯನ್ನು ಪಡುವುದಿಲ್ಲ. ಇದು ಏನಾಗಿದೆ ಎಂದರೆ ತಾವು ನೋಡಿರಬಹುದು ಆಂಧ್ರಪ್ರದೇಶದಲ್ಲಿ ನಡೆಯುವಂತಹ ಅಸೆಂಬ್ಲಿ ಪ್ರೊಸೀಡಿಂಗ್ಸ್ 2-3 ಸಲ ರಾಷ್ಟ್ರೀಯ ಪ್ರಚಾರದಲ್ಲಿ ಬಂತು, ಮತ್ತೆ ಕೆಲವು ಮುಖ್ಯವಾದಂತಹ ಅಂತರ ರಾಜ್ಯ ಜಲವಿವಾದವಾಗಲಿ, ಗಡಿ ವಿವಾದವಾಗಲಿ, ಅಥವಾ ರಾಜ್ಯ ಮತ್ತು ಕೇಂದ್ರಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಹೈಲೈಟನಲ್ಲಿ ಹೇಳುತ್ತಾರೆ. ಆದರೆ ನಮ್ಮ ದೂರದರ್ಶನದಲ್ಲಿ ಯಾವುದು ಬೇಕೋ ಅಷ್ಟು ಮಾತ್ರ ಬರುತ್ತದೆ. ಈ ರಾಜ್ಯದ ಅನೇಕ ಸಮಸ್ಯೆಗಳು ಚರ್ಚೆ ಮಾಡುವುದರ ಬಗ್ಗೆ ಹೆಚ್ಚಿನ ಮಾಹಿತಿಗಳ ವರದಿ ಏನು ಇರುತ್ತದೆ ಅಷ್ಟು ಮಾತ್ರ ಕವರ್ ಆಗುತ್ತದೆ. ಆದರೆ ಯಥಾಪ್ರಕಾರ ಎಷ್ಟು ಅದಕ್ಕೆ ಮಹತ್ವ

ಕೊಡಬೇಕು, ವೀರ ಸ್ಟೇಟ್‌ಗಳಲ್ಲಿ ಯಾವ ರೀತಿ ರೀಜನಲ್ ನ್ಯೂಸ್‌ಗೆ ಮಹತ್ವ ಕೊಡುತ್ತಾರೆ, ಅದು ರಾಷ್ಟ್ರೀಯ ಪ್ರಚಾರದಲ್ಲಿ ಅಷ್ಟು ಇವತ್ತು ಕರ್ನಾಟಕದಲ್ಲಿ ಪ್ರಚಾರವಿಲ್ಲ. ಕೊನೆಯ ಪಕ್ಷ ಅಲ್ಲಿ ಈ ರೀತಿಯಾಗಿ ನಡೆಯಬಾರದೆನ್ನುವ ಒಂದು ಸಂದೇಶ ಈ ಮನೆಯಿಂದ ಹೋಗಬೇಕು. ಕೆಲವು ವಿಷಯಗಳಲ್ಲಿ ಸಂಬಂಧಪಟ್ಟವರನ್ನು ನಾನು ಕೇಳಿದೆ. ಇಲ್ಲಿ ನಡೆದ ಅನೇಕ ಚರ್ಚೆಗಳು ಬಂದಿಲ್ಲ. ಆದರೆ ಎರಡೂ, ಮೂರು ಆಂಧ್ರಪ್ರದೇಶದ ಬಂದಿದ್ದಾವಲ್ಲಾ ಎಂದು ಕೇಳಿದಾಗ, ನಾವೇನು ಮಾಡುವುದಕ್ಕಾಗುತ್ತದೆ, ಇದು ನೇರವಾಗಿ ಮಂತ್ರಿಗಳೂ ಕೂಡ ನಮಗೆ ಹೇಳಿದ್ದಾರೆ, ಈ ಸೂಚನೆ ಇದೆ ಎನ್ನುವುದನ್ನೂ ಕೂಡ ಹೇಳುವಂತಿಲ್ಲ ಎಂದರು. ನಾನು ಹೇಳಿದವರ ಹೆಸರನ್ನು ಹೇಳುವುದಿಲ್ಲ, ಏಕೆಂದರೆ ನಾಳೆ, ಅವರನ್ನು ಜಮ್ಮು ಕಾಶ್ಮೀರ್, ಲಡಾಕ್ ಅಥವಾ ಈ ಮೇಘಾಲಯದ ಕಡೆ ವರ್ಗಾವಣೆ ಮಾಡಿಬಿಡುತ್ತಾರೆ. ಅವರು ಇಂಪಾರ್ಷಿಯಲ್ ಆಗಿ ಕೊಡಲಿ, ನಾವು ಹೀಗೆಯೇ ಕೊಡಬೇಕೆಂದು ಹೇಳುವುದಿಲ್ಲ; ನ್ಯಾಷನಲ್ ನೆಟ್‌ವರ್ಕ್‌ನಲ್ಲಿ ಐದು ನಿಮಿಷ, ಆರು ನಿಮಿಷ ನಮ್ಮದೇ, ಕರ್ನಾಟಕ ರಾಜ್ಯದ್ದೇ ಬರಬೇಕೆನ್ನುವುದಿಲ್ಲ. ಆದರೆ ಮಹತ್ವವಾದ ವಿಷಯಗಳಾದ ಆಲಮಟ್ಟಿ ಇರಬಹುದು, ಕಾವೇರಿ ಇರಬಹುದು, ಕೃಷ್ಣಾ ಇರಬಹುದು ಅಥವಾ ಮೊನ್ನೆ ಸದನದಲ್ಲಿ ನಡೆದಂಥ ಕಲಾಪವೇ ಇರಬಹುದು ಇಂಥ ಮಹತ್ವದ ವಿಷಯಗಳಾದರೂ ಬರಬೇಕು. ಮೊನ್ನೆ ಅಲ್ಲಿ ಬಜೆಟ್ ಸೆಷನ್‌ದ್ದು ನಡೆಯಿತು, ಓಪನಿಂಗ್ ಆಫ್ ಜಾಯಿಂಟ್ ಸೆಷನ್‌ದು ಕೂಡ ಬಂತು ಮತ್ತು ಆ ಸದನದಲ್ಲಿ ನಡೆದಂಥ ಕೆಲವು ಚರ್ಚೆಗಳನ್ನೂ ಕೂಡ ತೋರಿಸಿದರು, ಮಹಾರಾಷ್ಟ್ರದ್ದು ತೋರಿಸಿದರು, ರಾಜಸ್ಥಾನದ್ದು ತೋರಿಸಿದರು, ರಾಜಸ್ಥಾನದಲ್ಲಿ ಹೊಡೆದಾಟ ಬಡಿದಾಟ ಉಂಟಾಗಿದ್ದು ಕೂಡ ತೋರಿಸಿದರು. ಹೀಗೆಲ್ಲಾ ಇದ್ದಾಗ ಕೊನೆಯ ಪಕ್ಷ ನ್ಯಾಯವಾಗಿರುವ ಯಾವ ಸಮಸ್ಯೆಯನ್ನು ರಾಷ್ಟ್ರಮಟ್ಟದಲ್ಲಿ ಹೈಲೈಟ್ ಮಾಡಬಹುದು, ಅಭಿವೃದ್ಧಿ ಕೆಲಸಕಾರ್ಯಗಳೇ ಇರಬಹುದು, ಯಾವುದೇ ಇರಬಹುದು, ಅಂಥವಕ್ಕಾದರೂ ಅವರು ಸ್ವಲ್ಪ ಮಹತ್ವವನ್ನು ಕೊಡಬೇಕಲ್ಲ? ಖಂಡಿತವಾಗಿಯೂ ಇದರಿಂದ ನಮಗೆ ಒಂದು ಅನ್ಯಾಯವಾಗುತ್ತಿದೆ. ಹೊಡೆದಾಟದ್ದನ್ನು ತೋರಿಸುತ್ತಾರೆಂದು ಹೇಳಿದರೆ, ನಾನು ಅದನ್ನು ತೋರಿಸಬೇಕೆಂದು ಹೇಳಲಿಲ್ಲ, ಒಳ್ಳೆಯದ್ದನ್ನು ತೋರಿಸಲಿ, ಸರ್ಕಾರ ಒಳ್ಳೆಯದ್ದನ್ನು ಮಾಡಿದ್ದನ್ನು ತೋರಿಸಲಿ, ಈ ಕಡೆ ಒಳ್ಳೆಯದನ್ನು ಹೇಳಿದ್ದನ್ನು ಹೇಳಲಿ.

ಶ್ರೀ ಹೆಚ್.ಎನ್. ನಂಜೇಗೌಡ : ಇಲ್ಲ, ಅದೇನಾಗಿದೆ ಎಂದರೆ, ಇದರ ಅನುಭವ ಎಲ್ಲರಿಗೂ ಆಗುತ್ತಿದೆ, ಈ ಕಡೆ ಆ ಕಡೆ ಎಂದಲ್ಲ, ಹೊರಗಡೆಯೂ ಕೂಡ ಕೆಲವಾರು ಪ್ರಾಮುಖವಾದ ವಿಚಾರಗಳು ನಡೆಯುತ್ತದೆ, ಅದೇನೂ ದೂರದರ್ಶನದಲ್ಲಿ ಬರುವುದೇ ಇಲ್ಲ. ಅದೇನು ಅಲ್ಲಿರುವ ಅಧಿಕಾರಿಗಳ ಮೇಲೆ ಹೋಗುತ್ತದೆಯೋ ಏನೋ ಗೊತ್ತಾಗುತ್ತಿಲ್ಲ, ಮೊದಲು ಒಬ್ಬ ಅಧಿಕಾರಿಗಳಿದ್ದಾಗ ಸ್ವಲ್ಪ ಆಸಕ್ತಿ ವಹಿಸಿ ಏನೇನೋ ಬರುತ್ತಿತ್ತು. ಒಬ್ಬ ಅಧಿಕಾರಿ ಬದಲಾವಣೆಯಾದ ಮೇಲೆ ಏಕೊ ಕಮ್ಮಿಯಾಗಿದೆ ಅಥವಾ ಒಬ್ಬ ಅಧಿಕಾರಿ ಬದಲಾವಣೆಯಾದರೆಂದು ಕಮ್ಮಿಯಾಗಿದೆಯೋ ನಮ್ಮವರೇ ಮಂತ್ರಿಗಳಾದರೆಂದು ಕಮ್ಮಿಯಾಯಿತೋ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಆದುದರಿಂದ ಇದನ್ನು ಸರಿಗಟ್ಟಲು ಸ್ವಲ್ಪ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಹೊಡೆದಾಡಿದರೆ ತಾನಾಗಿಯೇ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಕಾಗೋಡು ತಿಮ್ಮಪ್ಪನವರು ಹೇಳುವುದು ಸರಿಯಿಲ್ಲ, ಈಗ ಬಡಿದಾಡಿ ಪತ್ರಿಕೆಯಲ್ಲಿ ತಾನಾಗಿಯೇ ಬರುತ್ತದೆ ಹಾಗೆಯೇ ಮಾಡಿದರೆ ಇದರಲ್ಲೂ ಬರುತ್ತದೆಂದು ಹೇಳುತ್ತಿದ್ದಾರೆ. ನಾವು, ನಂಜೇಗೌಡರು ಹೊಡೆದಾಡುವುದಕ್ಕಾಗುತ್ತದೆಯೇ ?

ಅಧ್ಯಕ್ಷರು : ಹೊಡೆದಾಟ ಆಗಲೇಬೇಕೆಂದರೆ ಕಾಗೋಡು ತಿಮ್ಮಪ್ಪನವರು, ಬೈರೇಗೌಡರು ಮಾಡಲಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನನ್ನ ದುಃಖವೇನೆಂದರೆ, ಆ ದೂರದರ್ಶನವರಿಗೆ ನನ್ನ ಹೆಸರೇ ಗೊತ್ತಿಲ್ಲದಂತಾಗಿದೆ. ಕೆಲವು ಸಾರಿ ಹೇಗಾಗಿದೆ ಎಂದರೆ, ಶ್ರೀ ರೆಡ್ಡಿ ಎಂದು ಹೇಳಿಬಿಡುತ್ತಾರೆ, ಇನ್ನೊಂದು ಸಾರಿ ರೆಡ್ಡಿ ಎಂದು ಹೇಳಿಬಿಡುತ್ತಾರೆ, ಮತ್ತೊಂದು ಸಾರಿ ರಾಮರೆಡ್ಡಿ. ಎಂದು ಹೇಳಿಬಿಡುತ್ತಾರೆ. ದೂರದರ್ಶನದ ಪರಿಸ್ಥಿತಿ ಏನಾಗಿದೆ ಎಂದರೆ, ಅವರಿಗೆ ಯಾರಿಗೆ ಯಾರು ಎಂದು ಗೊತ್ತಿಲ್ಲ. ಬಹುಶಃ ಈ ಕಾರಣಕ್ಕೆ ಅವರು ವರದಿ ಮಾಡುತ್ತಿಲ್ಲವೇನೋ ಎಂದು ಅನ್ನಿಸುತ್ತದೆ. ನಮ್ಮ ಕಲಾಪಗಳ ಬಗ್ಗೆ ಏನೂ ದೂರದರ್ಶನದಲ್ಲಿ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರ ಹೆಸರನ್ನು ದೂರದರ್ಶನದವರು ಸೀರಿ ರೆಡ್ಡಿ ಎಂದು ಹೇಳುತ್ತಾರಂತೆ.

ಮಾನ್ಯ ಸದಸ್ಯರು : ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ದೂರದರ್ಶನದಲ್ಲಿ ಕರ್ನಾಟಕ ರಾಜ್ಯದವರು ಇಲ್ಲದೆ ಇರುವುದೇ ಆ ಪರಿಸ್ಥಿತಿಗೆ ಕಾರಣವೆಂದು ನಾನು ಹೇಳಬೇಕಾಗುತ್ತದೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನನ್ನ ಪರಿಸ್ಥಿತಿ ಹೀಗಿದೆ, ಅವರು ಪ್ರಚಾರ ಕೊಡದಿದ್ದರೂ ಚಿಂತೆಯಿಲ್ಲ, ನನ್ನನ್ನು ಈ ರೀತಿಯ ಹೆಸರುಗಳಿಂದ ಕರೆಯುವುದು ಬೇಡ.

ಶ್ರೀ ಹೆಚ್.ಎನ್. ನಂಜೇಗೌಡ : ಏನಾದರೂ ಕರೆಯಲಿ, ಶ್ರೀಮತಿ ರೆಡ್ಡಿ ಎಂದು ಕರೆಯುವುದು ಬೇಡ.

ಶ್ರೀ ಕಾಗೋಡು ತಿಮ್ಮಪ್ಪ : ಕರ್ನಾಟಕದ ಅನೇಕ ಹೆಸರುಗಳನ್ನು ಈಗ ಒಂದು ತಿಂಗಳು, ಒಂದು ತಿಂಗಳಿಂದ ಈಚೆಗೆ ಸ್ಪಷ್ಟವಾಗಿ ಉಚ್ಚಾರ ಮಾಡುತ್ತಿದ್ದಾರೆ, ಇಲ್ಲದಿದ್ದರೆ ನಿಜಲಿಂಗಪ್ಪನವರ ಹೆಸರನ್ನು ಅವರು ಗಪ್ಪ, ಗಪ್ಪ ಎಂದೇ ಹೇಳುತ್ತಿದ್ದರು. ಈಗ ಅವರಿಗೆ ಕಾಗೋಡು ತಿಮ್ಮಪ್ಪ ಎಂದು ಹೇಳುವುದಕ್ಕೆ ಬರುವುದೇ ಇಲ್ಲ, ತಿಮ್ಮಪ್ಪ, ತಿಮ್ಮಪ್ಪ ಗೌಡ, ಗೌಡ ಎಂದು ಹೇಳುತ್ತಾರೆ. ಸದ್ಯಕ್ಕೆ ದೇವೇಗೌಡರು ಪ್ರಧಾನಮಂತ್ರಿಗಳಾದ ಕಾರಣದಿಂದ ನಮ್ಮ ಕರ್ನಾಟಕದಲ್ಲಿರುವ ಕೆಲವು ಹೆಸರುಗಳನ್ನು ಉಚ್ಚಾರ ಮಾಡತಕ್ಕಂಥ ಅಭ್ಯಾಸಕ್ಕೆ ಬಂದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಎರಡೇ ಹೆಸರುಗಳನ್ನು ಸರಿಯಾಗಿ ಉಚ್ಚಾರ ಮಾಡುವುದಕ್ಕೆ ಬರುವುದು, ಒಂದು ದೇವೇಗೌಡ, ಇನ್ನೊಂದು ಸಿ.ಎಂ. ಇಬ್ರಾಹಿಂ, ಬೇರೆ ಹೆಸರು ಎಲ್ಲಿರುತ್ತದೆ ?

ಶ್ರೀ ಕಾಗೋಡು ತಿಮ್ಮಪ್ಪ : ದೇವೇಗೌಡರ ಹೆಸರು ಹೇಳುವುದಕ್ಕೆ ಬರುವುದಿಲ್ಲ, ಇಬ್ರಾಹಿಂ ರವರ ಹೆಸರು ಹೇಳುವುದಕ್ಕೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ದೂರದರ್ಶನ ಬರೀ ಇಬ್ರಾಹಿಂದಾಗುವುದು ಬೇಡ, ಎಲ್ಲಾ ಜನರಿಗೆ ಸಮಗ್ರವಾಗಿ ಆಗಬೇಕಾದ್ದು. ಅಧ್ಯಕ್ಷರೆ, ಈಗ ನಾನು ಮತ್ತು ಖರ್ಗೆಯವರು ಏನು ಹೇಳುತ್ತಿದ್ದೇವೆಂದರೆ, ಈ ರೀತಿ ಸದನದ ಅನೇಕ ವಿಚಾರಗಳನ್ನು ಕೇಂದ್ರದ ದೂರದರ್ಶನದಲ್ಲಿ ಇಂಗ್ಲೀಷ ಮತ್ತು ಹಿಂದಿಯಲ್ಲೂ ಬರಬೇಕು. ತಮಿಳುನಾಡಿನಲ್ಲಿ ಹಿಂದಿ ಇಲ್ಲವೇ ಇಲ್ಲ, ಎರಡು ಸಾರಿ ತಮಿಳಿನಲ್ಲಿ ಸುದ್ದಿಯನ್ನು ಕೊಟ್ಟಿದ್ದಾರೆ; ನಮಗೆ ಕೊಡುತ್ತಿರುವ ಒಂದೇ ಒಂದು ಸಾರಿ ಸುದ್ದಿ, ಅದನ್ನೂ ಕೂಡ ಸರಿಯಾಗಿ ಕೊಡುತ್ತಿಲ್ಲ. ಅದರ ಬಗ್ಗೆ ವಾರ್ತಾ ಸಚಿವರು ತಮ್ಮ ಅಭಿಪ್ರಾಯವನ್ನು ಹೇಳಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ದೂರದರ್ಶನದಲ್ಲಿ ಅತಿಮುಖ್ಯವಾಗಿ ಕೃಷಿ ಕಾರ್ಯಕ್ರಮಗಳು ಬರಬೇಕು. ಉದಾಹರಣೆಗೆ ಮೊನ್ನೆ ಬೈರೇಗೌಡರು ಏನು ಹೇಳಿದ್ದಾರೆಂದರೆ, ಕೇವಲ ಬಿತ್ತನೆ ಬೀಜ ಒಂದರಲ್ಲೇ ನಾಲ್ಕು ಸಾವಿರ ಕೋಟಿ ರೂಪಾಯಿಗಳು ಬೆಳೆ ಬೆಳೆದು ನಷ್ಟವಾಗಿರುವ ವಿಷಯವನ್ನು ಹೇಳಿದರು. ಸುಮಾರು ಸೀಡ್ ಕಾರ್ಪೊರೇಷನ್‌ಗಳು ಬಿತ್ತನೆ ಬೀಜದ ಉಪಯೋಗದ ಬಗ್ಗೆ, ಒಳ್ಳೆಯ ಬಿತ್ತನೆ ಬೀಜಗಳು ಯಾವ್ಯಾವುವು ಎಂದು ವಿವರಣೆ ಬಗ್ಗೆ, ಬಹಳ ಗಂಭೀರವಾಗಿ ಚರ್ಚೆ ಮಾಡಬೇಕಾದ ಕೃಷಿ ಕ್ಷೇತ್ರದ ಬಗ್ಗೆ ದೂರದರ್ಶನದ ಕಾರ್ಯಕ್ರಮಗಳು ಹೆಚ್ಚಾಗಿ ಆಗಬೇಕು. ಯಾವುದೇ ಕಾರ್ಯಕ್ರಮವಿರಲಿ ದಯವಿಟ್ಟು ದೂರದರ್ಶನ ಯಾವಾಗಲೂ ಗಂಭೀರವಾಗಿ ಕೆಲಸ ಮಾಡಬೇಕು. ನೀವೇ ಹೇಳಿದ್ದೀರಿ, ನಾಲ್ಕು ಸಾವಿರ ಕೋಟಿ ರೂಪಾಯಿಗಳ ನಷ್ಟ ಪಿರಿಯಾಪಟ್ಟಣ ಒಂದರಲ್ಲೇ ಆಗಿದೆ.

ಶ್ರೀ ಸಿ. ಬೈರೇಗೌಡ : ಪಿರಿಯಾ ಪಟ್ಟಣದಲ್ಲಿ ಕಳೆದ ಬೆಳೆಯ ಸಂದರ್ಭದಲ್ಲಿ ಒಳ್ಳೆಯ ಬಿತ್ತನೆ ಬೀಜ ಸರಬರಾಜಾಗದೆ, ಒಳ್ಳೆಯ ಬೆಳೆ ಬರದೆ ರೈತರಿಗೆ ನಷ್ಟವಾಗಿರುವುದು ನಿಜ. ಆದರೆ ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ನಾಲ್ಕು ಸಾವಿರ ಕೋಟಿ ರೂಪಾಯಿಗಳ ನಷ್ಟವಾಯಿತು ಎಂದು ನಾನು ಹೇಳಿಲ್ಲ.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ : ಮೂರು ಸಾವಿರ ರೂಪಾಯಿಗಳು.

ಶ್ರೀ ಸಿ. ಬೈರೇಗೌಡ : ನಾನು ಅಲ್ಲಿ ಕಣ್ತುಂಬ ನೋಡಿಕೊಂಡು ಬಂದಿದ್ದೇನೆ, ಸುಮಾರು ಏಳೆಂಟು ಎಕರೆ ಪ್ರದೇಶದಲ್ಲಿ ಬೆಳೆ ಹಾಳಾಗಿರುವುದು ನಿಜ. ಆದರೆ ಸಾವಿರಾರು ಕೋಟಿ ರೂಪಾಯಿಗಳ ಬೆಳೆಗಳು ಹಾಳಾಗಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ್ದನ್ನು ಸರಿಪಡಿಸಲು ವಿವರಣೆಯನ್ನು ನೀಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ: ಈಗ ಅವರು, ಮೂರು ಸಾವಿರ, ನಾಲ್ಕು ಸಾವಿರ ಅದೇನಾದರೂ ಕೊಟ್ಟುಕೊಳ್ಳಲಿ, ಆ ಪ್ರಶ್ನೆ ಬೇರೆ, ನಮಗೆ ಪ್ರಚಾರ ಕೊಡುತ್ತಿಲ್ಲ, ಈ ಸದನದ ಪ್ರಚಾರ ಕೊಡುತ್ತಿಲ್ಲ, ಬೇರೆ ಪಕ್ಷಗಳಿಗೆ ಪ್ರಚಾರ ಕೊಡುತ್ತಿಲ್ಲ, ರಾಷ್ಟ್ರೀಯ ಹಬ್ಬಕ್ಕೆ ಪ್ರಚಾರ ಕೊಡದೆ ಅದೊಂದು ರೀತಿಯ ದಿವಾಳಿಯಾಗಿದೆ, ಅಲ್ಲಿ ಕೆಲಸ ಪ್ರಾಮಾಣಿಕವಾಗಿ ನಡೆಯುತ್ತಿಲ್ಲ. ಅಲ್ಲಿ ಬುದ್ಧಿ ಒಂದೇ ಅಲ್ಲ, ಅಲ್ಲಿಯ

ಸಮಗ್ರದ ವ್ಯವಹಾರದ ಬಗ್ಗೆ ಇಲ್ಲೊಂದು ಚರ್ಚೆಯಾಗಲೇ ಬೇಕಾಗುತ್ತದೆ, ಬೇಕಾದರೆ ಹಕ್ಕುಚ್ಯುತಿ ತರುವುದಕ್ಕೆ ನಾನು ಸಿದ್ಧವೆನ್ನುವ ಮಾತನ್ನು ನಾನು ತಮ್ಮ ಮೂಲಕ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಸದನದ ಕಲಾಪಗಳಿಗೆ ಸಾಕಷ್ಟು ಪ್ರಚಾರ ಸಿಗುತ್ತಿಲ್ಲವೆನ್ನುವ ದೃಷ್ಟಿಯಿಂದ ಸದನದ ಎಲ್ಲಾ ಕಡೆಯ ಸದಸ್ಯರು ವ್ಯಕ್ತಪಡಿಸಿರುವ ಭಾವನೆಯನ್ನು ಸಂಬಂಧಿಸಿದವರಿಗೆ ನಾನೇ ಸದನದ ಜವಾಬ್ದಾರಿಯನ್ನು ಹೊತ್ತ ಅಧ್ಯಕ್ಷನಾಗಿ ಅವರಿಗೆ ಪತ್ರ ಬರೆದು ತಿಳಿಸಿ, ಅವರಿಗೆ ಯಾವ ರೀತಿ ಸೂಚನೆಯನ್ನು ಕೊಡಬೇಕೋ ಎನ್ನುವುದನ್ನು ನಾನು ತಿಳಿಸುತ್ತೇನೆ ಎನ್ನುವ ಆಶ್ವಾಸನೆಯನ್ನು ತಮಗೆ ಕೊಡುತ್ತಿದ್ದೇನೆ. ಈಗ ಸರ್ಕಾರದ ಗಮನಕ್ಕೆ ಮೂರು ವಿಚಾರಗಳನ್ನು ತರಬೇಕಾಗಿದೆ. ಒಂದು ಡಾ|| ಯು.ಆರ್. ಚಿತ್ತರಂಜನ್‌ರವರ ವಿಚಾರದಲ್ಲಿ, ತಾವು ಅಲ್ಲಿ ಬಿಸಿಯಾಗಿದ್ದಿರಿ, ನಾನು ಎರಡು ಮೂರು ಸಲ ಹೇಳಿದೆ, ನಾವು ಸಭೆ ಸೇರಿ ತೀರ್ಮಾನ ಮಾಡುವುದಕ್ಕಾಗಲಿಲ್ಲ. ನಾಳೆ ಸದನ ಮುಕ್ತಾಯವಾಗುತ್ತಿದೆ, ದಯಮಾಡಿ ನೀವು ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಯಾವಾಗ ಸಭೆಯನ್ನು ಏರ್ಪಾಡು ಮಾಡುತ್ತಿರೆನ್ನುವುದನ್ನು ವಿಚಾರ ಮಾಡಿ. ಎರಡನೆಯದು, ಶ್ರೀ ಜಯರಾಮ ಶೆಟ್ಟಿ ಹಾಗ ಸಭಾಪತಿಯವರ ಮೇಲಿರುವ ಮೊಕದ್ದಮೆಯನ್ನು ವಾಪಸ್ ಪಡೆದುಕೊಳ್ಳುವ ವಿಚಾರದಲ್ಲಿ ನಾನು ಸನ್ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಟ್ಟಿದ್ದೆ, ಆದರಲ್ಲಿ ಏನೋ ಸಣ್ಣ ಸಮಸ್ಯೆ ಇತ್ತು ಎಂದು ಹೇಳಿದಿರಿ, ಅದನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕಂಥದ್ದು ಒಂದು. ಮೈಸೂರು ಕಾರ್ಪೊರೇಷನ್‌ಗೆ ಸಂಬಂಧಿಸಿದಂತೆ ಅಲ್ಲಿ ಮಾನ್ಯತೆ ಕೊಟ್ಟಿಲ್ಲವೆಂದಾಗ ತಾವು ಕಾನೂನನ್ನು ನೋಡಿ ಹೇಳುತ್ತೇನೆಂದು ಹೇಳಿದಿರಿ.

ಶ್ರೀ ವಾಟಾಳ್ ನಾಗರಾಜ್ : ಕುಡಿಯುವ ನೀರಿನ ಬಗ್ಗೆ ಉತ್ತರವನ್ನು ಕೊಡುತ್ತೇನೆಂದು ಬಚ್ಚೇಗೌಡರು ಹೇಳಿದರು, ಅವರು ಈಗ ಆ ಉತ್ತರವನ್ನು ಕೊಡಲು ತಯಾರಾಗಿದ್ದಾರೆ.

ಅಧ್ಯಕ್ಷರು : ಒಂದೊಂದಾಗಿ ಹೇಳುತ್ತೇನೆ, ಆಮೇಲೆ ಹುಣಸೂರು ಶಾಸಕರಾದ ನಮ್ಮ ವಿಜಯಶಂಕರ್‌ರವರು ಆ ಪ್ರತಿಮೆಯ ವಿಷಯವನ್ನು ಪ್ರಸ್ತಾಪ ಮಾಡಿದರು, ದೇವರಾಜ ಅರಸ್‌ರವರ ಇನ್‌ಸ್ಟಿಟ್ಯೂಟ್ ಬಗ್ಗೆಯೂ ಹೇಳಿದ್ದಾರೆ. ಬಾಲಕೃಷ್ಣನವರೇ ನಿಮ್ಮವಿಚಾರಕ್ಕೆ, ನಮ್ಮವೈ. ರಾಮಕೃಷ್ಣನವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ, ಆ ರೀತಿ ಮಾಡೋಣ. ಗೃಹಮಂತ್ರಿಗಳು ಇಲ್ಲ, ಆ 145ರ ಬಗ್ಗೆ ಏನು ಹೇಳಿದ್ದೀರಿ. ಅದನ್ನೆಲ್ಲಾ ಇಲ್ಲಿ ಚರ್ಚೆ ಮಾಡುವುದು ಬೇಡ, ತಾವು ನಂತರ ಬನ್ನಿ ನಾನು ಕರೆಯಿಸಿ ಮಾತನಾಡುತ್ತೇನೆ. ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಇವತ್ತು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದೀರಿ, ವಾಟಾಳ್ ನಾಗರಾಜ್‌ರವರು, ಕುಡಿಯುವ ನೀರಿನ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ದಯಮಾಡಿ ಇವೆಲ್ಲವನ್ನೂ ನಾಳೆಯೊಳಗೆ ಮುಗಿಸಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ನನಗೆ ಸಂಬಂಧಿಸಿದಂತೆ ಉತ್ತರ ಕೊಡಲು ಸಂಬಂಧಿಸಿದ ಮಂತ್ರಿಗಳು ತಯಾರಾಗಿದ್ದಾರೆ.

ಅಧ್ಯಕ್ಷರು : ಅಲ್ಲ, ತಮ್ಮ ಕಷ್ಟವನ್ನು ಹೇಳಿಬಿಡುತ್ತೇನೆ, ಇಷ್ಟು ವಿಚಾರಗಳು ಅವರ ಕಡೆಗೆ ಪೆಂಡಿಂಗ್ ಇವೆ, ನಾಳೆ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವವರಿದ್ದಾರೆ, ರಾಜ್ಯಪಾಲರ ಭಾಷಣದ ಮೇಲೆ ಇನ್ನು ಇಬ್ಬರು ಮೂರು ಮಾತನಾಡುವವರಿದ್ದಾರೆ, ನಾವು ಎಷ್ಟು ಜನಕ್ಕೆ ಅವಕಾಶ

ಕೊಡಬೇಕೋ ಅಷ್ಟು ಜನಕ್ಕೆ ಅವಕಾಶ ಕೊಡಬೇಕು, ಇವತ್ತು ಎಷ್ಟು ಹೊತ್ತಿನವರೆಗೆ ಕುಳಿತುಕೊಳ್ಳಬೇಕು, ಈಗ ನಾಲ್ಕು ಗಂಟೆಯಾಗಿದೆ. ಅದಕೋಸ್ಕರ ನಮ್ಮ ಎಚ್ಚರ ತಪ್ಪಿ ಅವು ಸರ್ಕಾರದ ಗಮನಕ್ಕೆ ಬರದೆ ಹೋಗಬಾರದೆಂದು ನಾನು ಕೊಟ್ಟು ಬಿಟ್ಟಿದ್ದೇನೆ. ಜಯಚಂದ್ರರವರಿಗೆ ಸಂಬಂಧಿಸಿದಂತೆ ಅರೆಕಾಲಿಕ ಶಿಕ್ಷಕರ ಬಗ್ಗೆ ಒಂದು ಹೇಳಿಕೆಯನ್ನು ಮಾಡಿಸಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ನಮಗೆಲ್ಲಾ ಅವಕಾಶ ಕೊಡಬೇಕು, ನಮ್ಮ ಕಡೆಗೆ ಅವಕಾಶ ಕೊಟ್ಟಿಲ್ಲ.

ಅಧ್ಯಕ್ಷರು : ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೆ ಕಂದಾಯ ಮಂತ್ರಿಗಳಾದ ಜಿಗಜಿಣಗಿಯವರು ಉತ್ತರ ಕೊಡಬೇಕು.

ಅಧ್ಯಕ್ಷರು : ಹೇಳಿದ್ದೇನಲ್ಲಾ ರೆಡ್ಡಿಯವರೇ, ನೀವು ಬಹಳ ಉದ್ದ ಇದ್ದೀರಿ, ನೀವು ನಿಂತುಬಿಟ್ಟರೆ ಬಹಳ ಕುಳ್ಳಾಗಿರುವ ಶಿವರಾಮೇಗೌಡರೆಲ್ಲಾ ಕಾಣುವುದೇ ಇಲ್ಲ, ಸಮಸ್ಯೆಯಾಗುತ್ತದೆ. ತಾವು, ಎತ್ತರ ಜಾಸ್ತಿ ಇದ್ದೀರಿ, ನೀವು ನಿಂತುಕೊಂಡರೆ ಶಿವರಾಮೇಗೌಡರು ನಿಂತುಕೊಂಡರು ಕಾಣುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ಇಬ್ಬರ ಹಾವಳಿಯಲ್ಲಿ ನಾವು ನಿಮಗೆ ಕಂಡರೆ ಸಾಕು ಎನ್ನುವ ಹಾಗೆ ಆಗಿದೆ ನಮ್ಮ ಪರಿಸ್ಥಿತಿ.

4.00 ಪಿ.ಎಂ.

ಅಧ್ಯಕ್ಷರು : ಶಿವರಾಮೇಗೌಡರು ಎತ್ತರ ಕಡಿಮೆ ಇದ್ದಾರೆಂದು ಭಯಪಡಬೇಕಾಗಿಲ್ಲ. ನೀವು ಸಾಕಷ್ಟು ಪ್ರಭಾವಶಾಲಿಗಳು. ನೀವು ಎಲ್ಲಿ ಇದ್ದರೂ ನಿಮ್ಮನ್ನು ಅನಿವಾರ್ಯವಾಗಿ ಗುರುತಿಸಲೇ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದು ಮನವಿ ಏನೆಂದರೆ ಮಂತ್ರಿಗಳ ಹೇಳಿಕೆ ರೆಡಿಯಾಗಿದೆ. ಅದಕ್ಕೆ ತಾವು ಒಂದು ಮಾತು ಹೇಳಿ ಮಂತ್ರಿಕೆಗಳಿಂದ ಹೇಳಿಕೆಯನ್ನು ಮಾಡಿಸಿ.

ಅಧ್ಯಕ್ಷರು : ಆಯಿತು, ಹೇಳಿಕೆ ಕೊಡಿಸುತ್ತೇನೆ.

ಶ್ರೀ ಬಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ನಾನು ಎತ್ತರ ಇದ್ದರೂ, ಮಾನ್ಯ ವಾಟಾಳರ ಹಿಂದೆ ತಮಗೆ ನಾನೂ ಏನೂ ಕಾಣುತ್ತಿಲ್ಲ. ನಾನು ಎತ್ತರ ಇದ್ದರೂ ಕಾಣುವುದಿಲ್ಲ. ಗಿಡ್ಡ ಇರುವವರು ತಮಗೆ ಕಾಣುತ್ತಾರೆ.

ಅಧ್ಯಕ್ಷರು : ನೀವು ಎದ್ದು ನಿಂತಾಗ, ನನಗೆ ಇಬ್ಬರು ಎದ್ದು ನಿಂತ ಹಾಗೆ ಕಾಣಿಸುತ್ತದೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ, ಸೋಮವಾರ ಪೇಟೆಯ ಅರಣ್ಯ ಇಲಾಖೆಯಲ್ಲಿಯ ಅಸಿಸ್ಟೆಂಟ್ ಕನ್ಸರ್‌ವೇಟರ್ ಆಫ್ ಫಾರಸ್ಟ್ ಮತ್ತು ರೇಂಜರ್ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಅರಣ್ಯ ಮಂತ್ರಿಗಳು ಹೇಳಿಕೆ ಕೊಟ್ಟಿಲ್ಲ.

ಅಧ್ಯಕ್ಷರು : ಶ್ರೀ ಗುರುಪಾದಪ್ಪನವರು, ಹಾಗೂ ಸಂಸದೀಯ ವ್ಯವಹಾರಗಳು ಸಚಿವರು ಸ್ವಲ್ಪ ಗಮನಹರಿಸಬೇಕು. ಮಾನ್ಯ ಸದಸ್ಯರುಗಳು ಯಾವ ಯಾವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದು ಅದಕ್ಕೆ ಉತ್ತರ ಸಿಕ್ಕಿಲ್ಲ ಅಂತಹವುಗಳಲ್ಲಿ ಕೆಲವು ಪ್ರಶ್ನೆಗಳಿಗೆಲ್ಲಾ ತಾವು ಲಿಖಿತ ಉತ್ತರ ಕಳುಹಿಸಿಕೊಟ್ಟರೆ ಸಾಕು. ಯಾವುದು ಬಹಳ ಪ್ರಮುಖವಾಗಿರತಕ್ಕಂಥದ್ದು ಇದೆ ಅದನ್ನು ಇಲ್ಲಿಯೇ ಸದನದಲ್ಲಿ ನಾಳೆ ಸದನದ ಕಾರ್ಯಕಲಾಪ ಮುಗಿಯುವುದರೊಳಗಾಗಿ ಉತ್ತರವನ್ನು ಮಂಡಿಸಿಬಿಟ್ಟರೆ ಚೆನ್ನಾಗಿರುತ್ತದೆ. ಈಗ ಮಾನ್ಯ ಏರ್ಗೆಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಅನುಮತಿ ಕೇಳಿಕೊಂಡಿದ್ದಾರೆ. ಅದು ಆದ ನಂತರ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.....

(೫೦) ಗ್ರಾನೈಟ್ ಬಗ್ಗೆ ಜಂಟಿ ಸಮಿತಿ ವರದಿ ನೀಡಿರುವುದು

ಶ್ರೀ ಎಂ. ಮಲ್ಲಿಕಾರ್ಜುನ ಏರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು, ಅದಕ್ಕೆ ತಮ್ಮ ಅಪ್ಪಣೆಯನ್ನು ಪಡೆದುಕೊಂಡಿರುತ್ತೇನೆ. ನಾನು ನಿಲುವಳಿ ಸೂಚನೆಯನ್ನು ತರಬೇಕೆನ್ನುವ ವಿಚಾರವನ್ನು ಇಟ್ಟುಕೊಂಡಿದ್ದೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡತಕ್ಕಂಥ ಅನೇಕ ಮಿತ್ರರು ಇದ್ದ ಕಾರಣ ಆ ವೇಳೆಯನ್ನು ಕಳೆಯಬಾರದೆಂದು ನೀವು ಸಮಯವನ್ನು ನಿಗದಿ ಮಾಡಿದ ಮೇಲೆ ನಾವು ಚರ್ಚೆ ಮಾಡಬೇಕೆನ್ನುವ ಉದ್ದೇಶದಿಂದ ಸದ್ಯಕ್ಕೆ ಈ ನಿಲುವಳಿ ಸೂಚನೆಯನ್ನು ತರುವುದನ್ನು ಕೈಬಿಟ್ಟಿದ್ದೇನೆ.ಅದರಿಂದ ನಾನು ಈಗ ಶೂನ್ಯ ವೇಳೆಯಲ್ಲಿ ಒಂದು ಪ್ರಮುಖವಾದಂಥ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದು 30ನೇ ಅಕ್ಟೋಬರ್ 1996ರಲ್ಲಿ ಜಂಟಿ ಸಮಿತಿ was constituted to enquire into the granite issue in the State and to report to the House. 22-7-1995ರ ಡಿಸ್‌ಕಷನ್‌ನ ಆಧಾರದ ಮೇಲೆ ಸರ್ಕಾರ 31–8-1995ರಲ್ಲಿ ಜಂಟಿ ಸದನ ಸಮಿತಿ ಕಾನ್ಷ್ಟಿಟ್ಯೂಟ್ ಮಾಡಿ ಅದಕ್ಕೆ 6 ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಕೊಟ್ಟಿದ್ದೀರಿ.

1) About the persons/Organisations involved in illegal quarrying and 21 such and other persons.

2) About the Transportation of Ornamental Granite Blocks and other various types of Granites using fake transport permits and the action taken by the concerned Departments in relation thereto.

3) Circular dated 22-7-95 issued by the Director of Mines and Geology and the circumstances behind issue of the said circular.

4) Details about oral orders received from the office of the Hon'ble Minister for Mines & Geology.

5) Procedure being following for grant of quarry lease/licence for ornamental granites and the policy in this regard.